**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 27.01.2025**

**ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಬಿ ಸಿ ವಕೀಲರಿಂದ**

ದಾವಾಸ್ವತ್ತಿನಲ್ಲಿ ಪ್ರತಿವಾದಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನಾನೆ ಸ್ವಾಧೀನದಲ್ಲಿದ್ದೇನೆ . ದಾವಾಸ್ವತ್ತಿನಲ್ಲಿ ಸುಮಾರು **15** ವರ್ಷಗಳಿಂದ ನಾನೆ ಸ್ವಾದೀನದಲ್ಲಿದ್ದೇನೆ. ದಾವಾಸ್ವತ್ತಿನ ಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಸ್ವತ್ತು ಇದೆ ಎಂದರೆ ಸರಿ. ಪ್ರತಿವಾದಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವಾಗಲಿ ದಾವಾಸ್ವತ್ತನಲ್ಲಿ ಅವರೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಚಿನ್ನಸ್ವಾಮಿ ಯವರು ದಾವಾಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಗೆ ನಿಡಿದ್ದಾರೆ ಎಂದರೆ ಸರಿಯಲ್ಲ. ಚಿನ್ನಸ್ವಾಮಿಯವರ ಹೆಂಡತಿ ರಾಜಮ್ಮ ರವರು ದಿಃ **12.02.1998** ರಲ್ಲಿ ಮೃತಪಟ್ಟಿರುತ್ತಾರೆ. ಚಿನ್ನಸ್ವಾಮಿಯವರು ದಿಃ **01.01.1990** ರಂದು ಮೃತಪಟ್ಟಿರುತ್ತಾರೆ . ಚಿನ್ನಸ್ವಾಮಿ ಹಾಗೂ ಅವರ ಹೆಂಡತಿ ಮೃತ ಪಟ್ಟ ನಂತರ ದಾವಾಸ್ವತ್ತನ್ನು ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಯಾವುದೆ ಪ್ರಯತ್ನ ಮಾಡಿರುವುದಿಲ್ಲ. ಚಿನ್ನಸ್ವಾಮಿಯರ ಮಕ್ಕಳು ಮೊದಲು ಊರಿನಲ್ಲಿ ವಾಸವಿರಲಿಲ್ಲ. ಈಗ ಒಂದು ಐದು ವರ್ಷಗಳ ಹಿಂದೆ ವಾಪಸ್ಸು ಬಂದಿರುತ್ತಾರೆ. ದಾವಾ ಆಸ್ತಿಯಲ್ಲಿ ಇದ್ದಂತಹ ಮನೆ ಈಗ ಬಿದ್ದು ಹೋಗಿರುತ್ತದೆ. ಈ ಪ್ರಕರಣ ದಾಖಲಿಸುವ ಸಮಯದಲ್ಲಿ ದಾವಾಸ್ವತ್ತಿನಲ್ಲಿ ಮನೆ ಇರಲಿಲ್ಲ. ಚಿನ್ನಸ್ವಾಮಿ ರವರು ಸೀಗೆಹೊಸೂರಿನಲ್ಲಿ ದಾವಾಸ್ವತ್ತಿನಲ್ಲಿ ಮನೆ ಬಿದ್ದ ನಂತರ ಬಾಡಿಗೆ ಮನೆಯಲ್ಲಿದ್ದು ಅಲ್ಲಿ ಮೃತ ಪಟ್ಟಿರುತ್ತಾರೆ. ದಾವಾಸ್ವತ್ತಿನಲ್ಲಿ ಯಾವುದೆ ಮನೆ ಇರಲಿಲ್ಲ ಹಾಗೂ ಅಲ್ಲಿ ಚಿನ್ನಸ್ವಾಮಿ ರವರು ವಾಸವಿರಲಿಲ್ಲ ಎಂದರೆ ಸರಿಯಲ್ಲ.

ಚಿನ್ನಸ್ವಾಮಿಯವರ ಮರಣ ಪ್ರಮಾಣ ಪತ್ರ ಪಡೆಯಲು ನಾನೆ ಅರ್ಜಿ ದಾಖಲಿಸಿರುತ್ತೇನೆ. ಅದನ್ನು ಈ ಪ್ರಕರಣ ದಾಖಲಿಸುವ ಮೊದಲೆ ಪಡೆದುಕೊಂಡಿರುತ್ತೇನೆ. ನಾನು ಮತ್ತು ಈ ಪ್ರಕರದ ವಾದಿಗಳು ಚಿನ್ನಸ್ವಾಮಿ ರವರ ಮಕ್ಕಳೆಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ . ವಾದಿಗಳಿಗೆ ಓದಲು ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಚಿನ್ನಸ್ವಾಮಿರವರಿಗೆ ಮಂಜೂರಾಗಿರುವ ಬಗ್ಗೆ ಹಕ್ಕುಪತ್ರಗಳನ್ನು ನ್ಯಾಯಾಲಯಕ್ಕೆ ಹಜರುಪಡಿಸಿರುವುದಿಲ್ಲ. ಅದು ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ತಂಗರಾಜು ಚಿನ್ನಸ್ವಾಮಿರವರ ಮಗ ಎಂದರೆ ಸರಿ. ಅವರು ಮೃತಪಟ್ಟು ಸುಮಾರು **15** ವರ್ಷವಾಗಿದೆ. ಅವರ ಹೆಂಡತಿ ಮಕ್ಕಳಿಗೂ ದಾವಾ ಸಲ್ಲಿಸುತ್ತಿರುವ ವಿಚಾರ ತಿಳಿಸಿದ್ದು ಅವರೂ ನನಗೆ ಜಿ ಪಿ ಎ ಮಾಡಿಸಿಕೊಟ್ಟಿರುತ್ತಾರೆ .

ದಾವಾಸ್ವತ್ತು ಪ್ರತಿವಾದಿಗೆ ಹೆಸರಿಗೆ ವರ್ಗಾವಣೆಯಾಗಿದೆ ಎಂಬ ವಿಚಾರ ನನಗೆ ಡಿಸೆಂಬರ್ **2017** ರಲ್ಲಿ ತಿಳಿದು ಬಂದಿರುತ್ತದೆ . ಪ್ರತಿವಾದಿಗೆ ಹಸೆರಿಗೆ ವರ್ಗಾವಣೆ ಆಗುವ ಪೂರ್ಣ ಆರ್ ಟಿ ಸಿ ಹಾಗೂ ಕಂದಾಯ ರಶೀದಿ ಪಡೆದುಕೊಂಡಿರುತ್ತೇನೆ. ಕಂದಾಯ ರಶೀದಿಯನ್ನು ಈ ಪ್ರಕರಣ ದಾಖಲಿಸುವ ಸಮಯದಲ್ಲಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ **6** ರಲ್ಲಿ ತಂಗರಾಜುರವರ ಹೆಸರು ಇಲ್ಲ ಎಂದರೆ ಸರಿ . ಆದಕಾರಣ ನಿಪಿ **6** ಸುಳ್ಳು ಪ್ರಮಾಣ ಪತ್ರ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕಾಗಿ ಚಿನ್ನಸ್ವಾಮಿ ರವರ ಹಸೆರನ್ನು ಆಸ್ತಿ ಹಾಗೂ ಹೆಸರು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ